ದಿನಾಂಕ 16.07.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀಮತಿ. ಎಸ್ ಕೆ ಡಿ ವಕೀಲರಿಂದಃ

ಈ ದಾವೆಯಲ್ಲಿ ಸಾಕ್ಷಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಅಂಶಗಳು ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

Patient record ನಿಪಿ-10 ಎಂದು, 3 ಕ್ಷ ಕಿರಣ ಒಟ್ಟಾಗಿ ನಿಪಿ-11 ಎಂದು ಗುರುತಿಸಲಾಯಿತು.

ಪಾಟೀ ಸವಾಲು : 2ನೇ ಎದುರುದಾರರ ಪರ ಶ್ರೀ. ಎಸ್ ವೈ ಎಸ್ ವಕೀಲರಿಂದಃ

ಅರ್ಜಿದಾರರು ಅಪಘಾತವಾದ ನಂತರ ಚನ್ನಪಟ್ಟದ ಸರ್ಕಾರಿ ಆಸ್ಪತ್ರೆಗೆ ಹೋಗಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಅರ್ಜಿದಾರರಿಗೆ ನಾನೇ ಚಿಕಿತ್ಸೆ ನೀಡಿ ಶಸ್ತ್ರಸ್ತ್ರ ಚಿಕಿತ್ಸೆ ಮಾಡಿದ್ದೇನೆ. ಅರ್ಜಿದಾರರಿಗೆ ಕೈ ಮೂಳೆ ಮುರಿತ ಆಗಿ ಕೂಡಿಕೊಂಡಿದೆ ಎಂದರೇ ಹೌದು. ಅರ್ಜಿದಾರರಿಗೆ ಜೋಡಿಸಿದ ಒಳ ಜೋಡಣೆ ತೆಗೆಯಾಲಾಗಿದೆ ಎಂದರೇ ಇಲ್ಲ. ಒಳ ಜೋಡಣೆ ತೆಗೆಯಲು 30 ಸಾವಿರ ಬೇಕು ಎಂದು ತಿಳಿಸಿದ್ದು ಅದಕ್ಕೆ Estimation ನೀಡಿದ್ದೀರ ಎಂದರೇ ಇಲ್ಲ. ಅದೇ ಶಸ್ತ್ರಸ್ತ್ರ ಚಿಕಿತ್ಸೆ ಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಮಾಡುತ್ತಾರೆ ಎಂದರೇ ಹೌದು. ಅಪಘಾತವಾಗಿ 3 ವರ್ಷ ಆಗಿದೆ ಪಿಜಿಯೋಥೆರಪಿ ಚಿಕಿತ್ಸೆ ಪಡೆದ ನಂತರ Mobility ಸರಿಯಾಗಿ ಇದೆ ಎಂದರೇ ಇಲ್ಲ.

2. Stability ವಿಚಾರದಲ್ಲಿ ಮೂಳೆ ಕೂಡಿಕೊಂಡಿರುವುದರಿಂದ ಅವರಿಗೆ ಯಾವುದೇ ರೀತಿಯ ತೊಂದರೇ ಇಲ್ಲ ಎಂದರೇ ಸರಿಯಲ್ಲ. ಅರ್ಜಿದಾರರ ಅಂಗ ಊನತೆ ಮತ್ತು ಸಂಪೂರ್ಣ ದೇಹದ ಊನತೆಯನ್ನು ಸರ್ಕಾರದ ನಿರ್ದೇಶದಂತೆ ಮಾಡಿಲ್ಲ. ಅರ್ಜಿದಾರರಿಗೆ ಹೆಚ್ಚಿ ನ ಪರಿಹಾರ ಕೊಡಿಸಲು ಊನತೆಯನ್ನು ಹೆಚ್ಚಾಗಿ ತೋರಿಸಿದ್ದೇವೆ ಎಂದರೇ ಸರಿಯಲ್ಲ. ಅರ್ಜಿದಾರರ ಮೂಳೆ ಕೂಡಿಕೊಂಡಿರುವುದರಿಂದ ಸಂಪೂರ್ಣವಾಗಿ ದೇಹಕ್ಕೆ ಶೇಕಡ 3 ರಿಂದ 4 ನಿಖರವಾಗಿ

ಭಾಗಕ್ಕೆ ಶೇಕಡ 10 ರಿಂದ 12 ಎಂದರೇ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)